ಯೂಟ್ಯೂಬ್ ವಿಡಿಯೊಗಳನ್ನು ನೋಡುವುದು ಅನೇಕರ ಪಾಲಿಗೆ ಹೊಸ ವಿಷಯ ತಿಳಿದುಕೊಳ್ಳುವ ಹಾಗೂ ಹೊತ್ತು ಕಳೆಯುವ ಉತ್ತಮ ಮಾರ್ಗ. ಆದರೆ, ಈ ವಿಡಿಯೊಗಳನ್ನು ಭಿನ್ನವಾಗಿ ರೂಪಿಸಿ ಕೋಟ್ಯಂತರ ರೂಪಾಯಿ ಸಂಪಾದನೆ ಮಾಡುವವರಿದ್ದಾರೆ. ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುವ ಪ್ರತಿ ವಿಡಿಯೊದಿಂದ ಕೋಟಿಗಟ್ಟಲೆ ಹಣ ಗಳಿಸುವವರಿದ್ದಾರೆ. ಯೂಟ್ಯೂಬ್ ಲೀಗ್ ಲೆಕ್ಕಾಚಾರದ ಪ್ರಕಾರ, ಒಂದು ವಿಡಿಯೊ ಅಪ್‌ಲೋಡ್ ಮಾಡಿ ಅತಿ ಹೆಚ್ಚು ಹಣ ಗಳಿಸುತ್ತಿರುವ ಮೊದಲ ಐವರ ಬಗೆಗಿನ ಸ್ವಾರಸ್ಯಕರ ಮಾಹಿತಿ ಇಲ್ಲಿದೆ.

■ ಪೃಥ್ವಿರಾಜ್

# ವಿಡಿಯೊ ವೀರರು!

## ಪ್ರತಿ ವಿಡಿಯೊಗೆ ಕೋಟಿ ಕೋಟಿ ರೂಪಾಯಿ!



### ವ್ಲಾಡ್ ಆ್ಯಂಡ್ ನಿಕಿತ

ಅಮೆರಿಕದ ಅವಳಿ ಸಹೋದರರಾದ ವ್ಲಾಡಿಸ್ಲವ್ ವಷ್‌ಕೆಟೊವ್ ಹಾಗೂ ನಿಕಿತ ವಷ್‌ಕೆಟೊವ್ ಪ್ರತಿ ವಿಡಿಯೊಗೆ ಹೆಚ್ಚು ಹಣ ಗಳಿಸುತ್ತಿರುವವರ ಸಾಲಿನಲ್ಲಿ ಮೊದಲಿಗರಾಗಿದ್ದಾರೆ. ಒಂದು ವಿಡಿಯೊವನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುವುದರಿಂದ, ಅವರ ಖಾತೆಗೆ ₹ 2.3 ಕೋಟಿ ಹಣ ಜಮೆಯಾಗುತ್ತದೆ!

ಇಷ್ಟಕ್ಕೂ ಈ ಪುಟ್ಟ ಪೋರರು ಮಾಡುತ್ತಿರುವುದೇನು? ಮತ್ತೇನಿಲ್ಲ, ಮಾರುಕಟ್ಟೆಗೆ ಬರುವ ಹೊಸ ಬೊಂಬೆಗಳೊಂದಿಗೆ ಆಟವಾಡುತ್ತಾ ಅವುಗಳ ಬಗ್ಗೆ ವಿವರಿಸುತ್ತಾ ಹೊಸ ಕಥೆಗಳನ್ನು ಹೇಳುತ್ತಾ ನೋಡುಗರ ಮನಸೂರೆಗೊಳ್ಳುತ್ತಾರೆ. ಇವರ ‘ವ್ಲಾಡ್ ಆ್ಯಂಡ್ ನಿಕಿ’ ಯೂಟ್ಯೂಬ್ ಚಾನೆಲ್‌ಗೆ 5.1 ಕೋಟಿ ಚಂದಾದಾರರಿದ್ದಾರೆ. ಇವರ ವಾರ್ಷಿಕ ಆದಾಯ ಸುಮಾರು ₹ 300 ಕೋಟಿ!

ಕೊಂಡಿ: bit.ly/31RPaD6

### ಲೈಕ್ ನ್ಯಾಸ್ಟ್ಯಾ ವ್ಲೋಗ್

ರಷ್ಯಾದ ಆರು ವರ್ಷದ ಪುಟಾಣಿ ಅನಸ್ಟಾಸಿಯಾಗೆ ‘ಸೆರೆಬ್ರಲ್ ಪಾಲ್ಸಿ’ ಎಂಬ ರೋಗ ಇದೆ ಎಂದು ಚಿಕ್ಕಂದಿನಲ್ಲೇ ಗೊತ್ತಾಯಿತು. ಇದರಿಂದ ವಯಸ್ಸು ಹೆಚ್ಚಾದಂತೆಲ್ಲಾ ದೇಹದ ಮಾಂಸಖಂಡಗಳು ಬಲಹೀನವಾಗಿ ನಡೆಯಲು ಆಗದಂತಹ ಸ್ಥಿತಿಗೆ ತಲುಪಬಹುದು. ಹೀಗಾಗಿ ಅನಸ್ಟಾ ತಂದೆ–ತಾಯಿ ತಮ್ಮ ಆಸ್ತಿಯನ್ನೆಲ್ಲ ಮಾರಿ, ಅದರಿಂದ ಬಂದ ಹಣದಿಂದ ಅನಸ್ಟಾಸಿಯಾ ಪುಟಾಣಿಗೆ ವಿವಿಧ ದೇಶಗಳಲ್ಲಿನ ಅಮ್ಯೂಸ್‌ಮೆಂಟ್ ಪಾರ್ಕ್‌ಗಳನ್ನು ತೋರಿಸುತ್ತಿದ್ದಾರೆ. ಈ ಭೇಟಿಯ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ಈ ವಿಡಿಯೊಗಳಿಗೆ ಹೆಚ್ಚು ಜನಪ್ರಿಯತೆ ದೊರೆತು, ಅನಸ್ಟಾಸಿಯಾ ಪೋಷಕರು ಅಮೆರಿಕೆಗೆ ಹೋಗಿ ನೆಲೆಸಿದ್ದಾರೆ. ಅಲ್ಲಿ ಪೂರ್ಣ ಪ್ರಮಾಣದಲ್ಲಿ ಯೂಟ್ಯೂಬ್ ಚಾನೆಲ್ ನಿರ್ವಹಿಸಲು ಆರಂಭಿಸಿದ್ದಾರೆ. ಅನಸ್ಟಾ ಜೊತೆ ಅವರ ತಂದೆ–ತಾಯಿ ಆಟವಾಡುತ್ತಾ ಅಪ್‌ಲೋಡ್ ಮಾಡುತ್ತಿರುವ ಒಂದೊಂದು ವಿಡಿಯೊಗೂ ಸುಮಾರು ₹ 2 ಕೋಟಿ ಹಣ ಸಿಗುತ್ತಿದೆ. ಇವರ ‘ಲೈಕ್ ನ್ಯಾಸ್ಟ್ಯಾ’ ಚಾನೆಲ್‌ಗೆ 5.9 ಕೋಟಿ ಚಂದಾದಾರರಿದ್ದಾರೆ. ಕೊಂಡಿ: bit.ly/2J8umR4

